ಹುಬ್ಬಳ್ಳಿಯಲ್ಲಿ ಸೀಮೆಎಣ್ಣೆಯ ಅನಧಿಕೃತ ಮಾರಾಟ.

1623(2298) ಶ್ರೀ ಅಶೋಕ್ ಶಂಕರ ಕಾಟ್ವೆ (ಹುಬ್ಬಳ್ಳಿ) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ ಶಹರದಲ್ಲಿ ಅಧಿಕೃತ ಸೀಮೆಎಣ್ಣೆಯನ್ನು ಅನಧಿಕೃತವಾಗಿ ಪ್ರತಿ ಲೀಟರಿಗೆ ರೂ. 15-00 ರಂತೆ ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಎಷ್ಟು ಜನರ ವಿರುದ್ಧ ಸರ್ಕಾರದವರು ಕ್ರಮ ಜರುಗಿಸಿದ್ದಾರೆ. (ಸಂಪೂರ್ಣ ವಿವರ ನೀಡುವುದು)

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :—

ಅ) ಬಿಳಿ ಸೀಮೆಎಣ್ಣೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟಗಾರರು ಯಾವ ಬೆಲೆಗಾದರೂ ಮಾರಬಹುದು. ಆದರೆ ನೀಲಿ ಸೀಮೆಎಣ್ಣೆ (ಪಡಿತರ ಸೀಮೆಎಣ್ಣೆಯನ್ನು ಸರ್ಕಾರ ನಿಗದಿಪಡಿಸಿದ ಬೆಲೆಯಲ್ಲೇ ಮಾರಾಟ ಮಾಡಬೇಕಿರುತ್ತದೆ. ಪಡಿತರ ಸೀಮೆಎಣ್ಣೆಯನ್ನು ಸರ್ಕಾರ ನಿಗದಿಪಡಿಸಿದ ಬೆಲೆಗಿಂತ ಹೆಚ್ಚಿಗೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ಉತ್ತರಹಳ್ಳಿ ಕ್ಷೇತ್ರದಲ್ಲಿ ಪಡಿತರ ಚೀಟಿಗಳು.

1624(2397) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಇರುವ ಪಡಿತರ ಚೀಟಿಗಳ ಸಂಖ್ಯೆ ಎಷ್ಟು;

ಆ) ಆ ಪೈಕಿ ಹಸಿರು ಪಡಿತರ ಚೀಟಿ ಹಾಗೂ ಫೋಟೋ ಪಡಿತರ ಚೀಟಿಗಳ ಸಂಖ್ಯೆ ಎಷ್ಟು;

ಇ) ಪಡಿತರ ಚೀಟಿ ಪಡೆಯಲು ತಡವಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು ಆ ಪೈಕಿ ಎಷ್ಟು ಜನರಿಗೆ ಪಡಿತರ ಚೀಟಿ ವಿತರಣೆ ಮಾಡಲಾಗಿದೆ;

ಈ) ತಡವಾಗಿ ಅರ್ಜಿ ಸಲ್ಲಿಸಿದವರಿಗೆ ಆದಷ್ಟು ಶೀಘ್ರ ಪಡಿತರ ಚೀಟಿ ಮಂಜೂರು ಮಾಡುವಲ್ಲಿ ಕೈಗೊಂಡಿರುವ ಕ್ರಮಗಳೇನು?